ಅವಳಿಗೆ ಬಾಲಾಜಿ ನೆನಪಾದ. ಎಲ್ಲಿದ್ದೇನೆ, ಏನು ಕಥೆ ಮುಂತಾಗಿ ಏನನ್ನು ತಿಳಿಸದಿದ್ದರೂ ಸಾಮಾನ್ಯವಾಗಿ ಅವನ ಹುಟ್ಟುಹಬ್ಬದ ದಿನ ಫೋನು ಮಾಡದಿದ್ದರೂ ಬೆಳ್ಳಂಬೆಳಿಗ್ಗೆ ಬಂದು ಬಿಡುತ್ತಿದ್ದ. ಉಳಿದವರಿಗಿರಲಿ ತನಗೆ ಅದರಿಂದ ಸಿಗುವ ಸಂತೋಷವೆಷ್ಟು ಎನ್ನುವುದರ ಅಂದಾಜಿತ್ತು ಅವನಿಗೆ. ಆದರೂ ಹೀಗೇಕೆ? ಏನಾದ್ರೂ ಹೆಚ್ಚು, ಕಮ್ಮಿ? ಸಂಸಾರದ ಜವಾಬ್ದಾರಿ ಅಂತ ಬಂದ್ರೆ ಎಲ್ಲ ಸರಿ ಹೋಗತ್ತೆ. ಫೋನ್ ಮಾಡಿ ತಿಳಿದುಕೊಳ್ಳೋಣವೆಂದರೆ ಅವನಿಗೆ ನಂಬರ್‌ಗಳನ್ನು ಬದಲಾಯಿಸುವುದೊಂದು ಚಟ. ಅವನೇ ಬರಬೇಕಷ್ಟೆ. ಸದ್ಯಕ್ಕೆ ಸುಮ್ಮನೆ ಕಾಯುವುದು ಬಿಟ್ಟು ಬೇರೇನಿದೆ ಎಂದುಕೊಂಡಳು.

ವಾಪಸು ಮನೆಗೆ ಬಂದಾಗಲೆ ಗಾಯದ ಮೇಲೆ ಗಮನ ಹೋದದ್ದು. ರಕ್ತ ಜಿನುಗುತ್ತಿದ್ದದ್ದು ಕಂಡಿದ್ದು ಪರೀಕ್ಷಿಸಿದಾಗ. ತೀರ ಕಡಿಮೆಯದಲ್ಲ ಎನಿಸಿತು. ಸುಮ್ಮನಿದ್ದು ವಿನಾಕಾರಣ ತೊಂದರೆ ತಂದುಕೊಳ್ಳುವುದರಲ್ಲಿ ಅರ್ಥವಿಲ್ಲವೆಂದು ಡ್ರೆಸಿಂಗ್ ಮಾಡಿಸಿಕೊಂಡು ಬರುವುದಕ್ಕೆ ಹೊರಟರು. ಆ ವೇಳೆಗಾಗಲೇ ರಸ್ತೆಯಲ್ಲಿ ಜನರ ಓಡಾಟ, ವಾಹನಗಳ ಚಲನೆ ಎಂದಿನ ಮಟ್ಟ ತಲುಪಿತ್ತು. ಆಫೀಸಿಗೆ ಹೊರಡಲು ವಾಹನಗಳನ್ನೇರಿದವರು, ಮಕ್ಕಳನ್ನು ಶಾಲೆಗೆ ಬಿಡುವುದಕ್ಕೆ ಅವಸರದಲ್ಲಿ ಅವರೊಂದಿಗೆ ಹೊರಟವರು, ತರಕಾರಿ ಮಾರುವ ಕೈಗಾಡಿಗಳು ಮುಂತಾದವೆಲ್ಲ ಸೇರಿ ಒಟ್ಟಾರೆ ಒತ್ತಡ ಮಿಳಿತಗೊಂಡ ವಾತಾವರಣ. ಆದರೆ ವಿಚಿತ್ರ ವಿಧಾನದಲ್ಲಿ ಅವಳು ಹೀರೋ ಆದ ಸಂಗತಿ ಇಡೀ ವಾತಾವರಣದಲ್ಲಿ ಹರಿದಾಡಿ ಪರಿಚಯ ಇರುವವರು, ಇಲ್ಲದವರು ಮುಂತಾದವರೆಲ್ಲ ಕೈ ಆಡಿಸಿ, ನಸುನಗುತ್ತ ಅಂಗೈ ಎತ್ತಿ, ಕೆಲವರು 'ಗ್ರೇಟ್ ಆಂಟಿ' ಎಂದು ಹತ್ತಿರಕ್ಕೆ ಬಂದಾಗ ಪಿಸುಮಾತಿನಲ್ಲಿ ಹೇಳಿ ಚಲಿಸುತ್ತಿದ್ದರು. ಮೆಲ್ಲಗೆ ಹೆಜ್ಜೆ ಹಾಕುತ್ತಿದ್ದ ಅವಳಿಗೆ ಇವೆಲ್ಲವೂ ಸೇರಿ ನೆಲದ ಮೇಲೆ ಹೊನ್ನಿನೆಸಳು ಹೊಳೆದಂತೆ ಕಂಡಿತು. ಈ ಭಾವನೆಯಲ್ಲೆ ಕೊಂಚ ಎಚ್ಚರ ತಪ್ಪಿದಂತಾಗಿ ಯಾರಿಗೋ ಡಿಕ್ಕಿ ಹೊಡೆಯುವ ಮುಂಚೆ ಅದನ್ನು ಮನಸ್ಸಿನಿಂದ ಕಿತ್ತು ಹಾಕಿ ತನ್ನದೇನಿದ್ದರೂ ಸರಿಯೆ, ಪ್ರಿಯಾಳದು ಅಷ್ಟಕ್ಕೇ ಮುಗಿಯಿತಲ್ಲ. ಇಲ್ಲದಿದ್ದರೆ ಏನಾಗುತ್ತಿತ್ತೋ. ಎಷ್ಟು ರಗಳೆಯೋ, ರಂಪವೋ... ಅವಳದನ್ನು ಹೇಗೆ ಎದುರಿಸುತ್ತಿದ್ದಳೋ, ಹೋರಾಡಿ ಮನುಷ್ಯಳಾಗುತ್ತಿದ್ದಳೋ... ಸದ್ಯ ತಪ್ಪಿತಲ್ಲ ಎನಿಸುತ್ತಿದ್ದಂತೆ ಸರಸೂ ಹತ್ತಿರವಿದ್ದ ಆಸ್ಪತ್ರೆಯ ಮೆಟ್ಟಲೇರುತ್ತಿದ್ದಳು. ಅಲ್ಲಿದ್ದ ಕೆಲವರಿಗೂ ಆ ವೇಳೆಗಾಗಲೇ ಸಾಕಷ್ಟು ವಿವರಗಳು ಗೊತ್ತಾಗಿತ್ತು. ಪ್ರಿಯಾಳನ್ನು ರಾತ್ರಿ ಅಲ್ಲಿಗೆ ಕರೆದುಕೊಂಡು ಬಂದದ್ದರಿಂದ ಎಲ್ಲವೂ ಬಹಿರಂಗವಾಗಿತ್ತು.

**ಇಬ್ಬರೂ ಮಾತನಾಡದೆ ಅದೆಷ್ಟೋ ಹೊತ್ತು ಸುಮ್ಮನೆ ಕುಳಿತಿದ್ದರು. ಸರಸೂಗೆ ಸುತ್ತಮುತ್ತಲಿನ ಶಬ್ದಗಳೆಲ್ಲ ಹಠಾತ್ ಬಂದ್ ಆದಂತೆ ಒಮ್ಮೆ ಅನಿಸಿದರೆ ಎಲ್ಲವೂ ಒಂದಕ್ಕೆ ನೂರರಷ್ಟು ಹೆಚ್ಚಾಗಿ ಕಿವಿಗಪ್ಪಳಿಸಿದಂತೆ ಮತ್ತೊಮ್ಮೆ. ತನ್ನ ಇಷ್ಟು ವರ್ಷದ ಬದುಕು, ಹೋರಾಟವೆಲ್ಲ ತನ್ನ ಕಣ್ಣೆದುರೇ ಧಗಧಗಿಸಿ ಉರಿದಂತೆ.**

ಸರಸೂ ಓ.ಪಿ.ಡಿ.ಯತ್ತ ನಡೆಯುತ್ತಿರುವ ಹಾಗೆ ಹಿಂದೆ ಮುಂದೆ ಓಡಾಡುತ್ತಿದ್ದ